

ಡಾ. ವಿನೋದ ಛಬ್ಬಿ
ವೈದ್ಯ, ಆಪ್ತಸಮಾಲೋಚಕ

ಅತ್ಯಾಚಾರಕ್ಕೆ ಧಿಕ್ಕಾರ
ಸುಧಾ ಕಾಳಜಿ

# ಕಣ್ಣೀರು ನಿಟ್ಟುಸಿರು ಸಾಂತ್ವನ

ಅತ್ಯಾಚಾರದ ಘಟನೆಗಳು ವರದಿಯಾದಾಗ ಸಮಾಜದಲ್ಲಿ ಭಾವುಕತೆ ಸ್ಫೋಟಗೊಳ್ಳುತ್ತದೆ. ಅದು ಸಹಜ ಪ್ರಕ್ರಿಯೆ. ಭಾವುಕತೆಯ ಆಯುಸ್ಸು ಕಡಿಮೆ. ದುರಂತದ ಘಟನೆಗಳು ನಮ್ಮ ಮನಸ್ಸನ್ನು ಕಲಕುವುದರ ಜೊತೆಗೆ, ವಿವೇಚನೆಗೂ ಎಡೆ ಮಾಡಿಕೊಡಬೇಕು. ಲೈಂಗಿಕ ದೌರ್ಜನ್ಯ–ಕ್ರೌರ್ಯದ ಘಟನೆಗಳ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಮೂಲಕ ಮಾನವೀಯ ಸಮಾಜ ನಿರ್ಮಾಣದ ಸಾಧ್ಯತೆಗಳನ್ನು ಪರಿಶೀಲಿಸಬೇಕು. ಅತ್ಯಾಚಾರಿಗಳು ಹಾಗೂ ಸಂತ್ರಸ್ತರ ಮನಸ್ಥಿತಿಯನ್ನು ಮಾನಸಿಕ, ಸಾಮಾಜಿಕ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಚರ್ಚಿಸುವ ಈ ಬರಹ, ಆರೋಗ್ಯಕರ ಸಮಾಜವನ್ನು ರೂಪಿಸುವ ಪ್ರಯತ್ನಗಳಿಗೆ ನೀರೆರೆಯುವಂತಿದೆ.